ದಿನಾಂಕಃ **21.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಪ್ರತಿವಾದಿಯ ಪರ ವಕೀಲರಿಂದಃ

01. ದಾವಾ ಸ್ವತ್ತಿನ ವ್ಯವಹಾರ ಆದಾಗ ನನ್ನ ವಯಸ್ಸು ಎಷ್ಟಿತ್ತು? ಎಂದರೆ 40 ವರ್ಷ ಇತ್ತು. ಈ ವ್ಯವಹಾರ ನಡೆದ ದಿನ ನಾನು ಸೋಗಿ ಗ್ರಾಮದ ಬಜಾರದಲ್ಲಿ ಇದ್ದೆ. ಆಗ ಸಮಯ ಮಧ್ಯಾಹ್ನ 1.30 ರಿಂದ 2 ಗಂಟೆಯಾಗಿತ್ತು. ನನ್ನನ್ನು 1 ನೇ ಪ್ರತಿವಾದಿ ಕಾಳಮ್ಮ ವ್ಯಾಪಾರ ಹಚ್ಚಿದ್ದೇವೆ ಬಾ ಎಂದು ಕರೆದಳು. ಆಕೆ ಕರೆದಾಗ ಮಧ್ಯಾಹ್ನ ಸುಮಾರು 2 ಗಂಟೆಯಾಗಿತ್ತು. ಆಕೆ ಹೊಲ ವ್ಯಾಪಾರ ಹಚ್ಚಿದ್ದೇನೆ ಈಶಣ್ಣನ ಮನೆ ಹತ್ತಿರ ಬಾ ಎಂದು ಕರೆದಳು. ಕಾಳಮ್ಮ, ಹೊನ್ನಮ್ಮ ಮತ್ತು ಕೊಟ್ರೇಶ ಮುಂದೆ ಹೋದರು, ಅವರ ನಂತರ ನಾನು ಹಿಂದೆ ಹೋಗಿದ್ದೆ. ನಾನು ತೇರು ಗಾಡಿ ಹತ್ತಿರವೇ ಇದ್ದೆ. ನಾನು ಈಶಣ್ಣನ ಮನೆಗೆ ಹೋದಾಗ ಸುಮಾರು 2 ಗಂಟೆಯಾಗಿತ್ತು. ನಾನು ಹೋದಾಗ ಕಾಳಮ್ಮ, ಹೊನ್ನಮ್ಮ, ಕೊಟ್ರೇಶ ಮತ್ತು ಈಶಣ್ಣ ಇದ್ದರು. ನಾನು ಹೋದ ನಂತರ ದಂಡಪ್ಪ ಬಂದ. ನನ್ನ ಮುಂದೆ 8 ಎಕರೆ ಹೊಲ ಮಾರಾಟ ಮಾಡುತ್ತೇವೆಂದು ಅದಕ್ಕೆ ಕ್ರಯದ ಮೊತ್ತ ರೂ ಐದೂವರೇ ಲಕ್ಷವೆಂದು ಮಾತನಾಡಿ ವಾದಿ ಹೊನ್ನಮ್ಮ ರೂ. 5 ಲಕ್ಷ ಮೊತ್ತವನ್ನು ಕಾಳಮ್ಮನಿಗೆ ಕೊಟ್ಟಳು. ವಾದಿ ಹೊನ್ನಮ್ಮ 500 ರೂ. ಗಳ 10 ಕಟ್ಟುಗಳನ್ನು ಕಾಳಮ್ಮನಿಗೆ ಕೊಟ್ಟಳು. ಮಾತು-ಕತೆ ಮುಗಿದಾಗ ಸುಮಾರು ಎರಡೂ ಕಾಲು ಗಂಟೆಯಾಗಿತ್ತು. ನಂತರ ಮತ್ತೆ 6 ಗಂಟೆಗೆ ಈಶಣ್ಣನ ಮನೆಯಲ್ಲಿ ಹಣ ಕೊಟ್ಟರು. ಒಳಗಡೆ ಇದ್ದವರಲ್ಲಿ ಯಾರೋ ಒಬ್ಬರು ಬಾಂಡ್ ಪೇಪರ್ ತರಲಿಕ್ಕೆ ಫೋನ್ ಮಾಡಿದರು. ನಾನು ಮಾತು-ಕತೆ ಮುಗಿದ ನಂತರ ಈಶಣ್ಣನ ಮನೆಯಿಂದ ಹೊರಕ್ಕೆ ಬಂದು ಅಡವಿಮಲ್ಲನಕೇರಿ ಊರಿಗೆ ಹೋದೆ. ಬಾಂಡ್ ಪೇಪರ್ ಯಾರು ತಂದರೆಂದು ನನಗೆ ಗೊತ್ತಿಲ್ಲ. ಸಂಜೆ 6 ಗಂಟೆಗೆ ಹಣ ಕೊಟ್ಟರು. ನಾನು ಬಜಾರದಲ್ಲಿ ಇದ್ದಾಗ ವಾದಿ ಹೊನ್ನಮ್ಮ ಫೋನ್ ಮಾಡಿ ಈಶಣ್ಣನ ಮನೆಗೆ ಕರೆದು ನಂತರ ಹಣ ಕೊಟ್ಟಳು. ಬಾಂಡ್ ಪೇಪರ್ ನ್ನು ಈಶಣ್ಣನೇ ಆತನ ಮನೆಯಲ್ಲಿ ಬರೆದಿದ್ದ. ಈಶಣ್ಣ ಕೈಯಲ್ಲಿ ಬರವಣಿಗೆ ಮಾಡಿದ್ದಾನೆ. ಈಶಣ್ಣ ಕೈಯಲ್ಲಿ ಬರವಣಿಗೆ ಮಾಡಿದ ಸ್ವಾಧೀನ ರಹಿತ ಕರಾರು ಪತ್ರಕ್ಕೆ ನಾನು ಸಹಿ ಮಾಡಿದ್ದೀನಾ ? ಎಂದರೆ ಮಾಡಿದ್ದೇನೆ. ಆ ಪತ್ರಕ್ಕೆ ಬಿಟ್ಟರೆ ನಾನು ಬೇರೆ ಯಾವ ಪತ್ರಕ್ಕೂ ಸಹಿ ಮಾಡಿಲ್ಲವೇ ? ಎಂದರೆ ಇಲ್ಲ. ನನ್ನ ಸಮಕ್ಷಮ ವಾದಿಗೆ 1 ನೇ ಪ್ರತಿವಾದಿ ದಾವಾ ಸ್ವತ್ತು ಮಾರಾಟ ಮಾಡಿಕೊಡುವ ಬಗ್ಗೆ ಯಾವುದೇ ಕರಾರು ಆಗಿಲ್ಲ ಎಂದರೆ ಸರಿಯಲ್ಲ. ದಿನಾಂಕ 21.05.2016 ರಂದು ಕ್ರಯದ ಕರಾರು ಆಗಿದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಂದೆ ವಾದಿಯು 1 ನೇ ಪ್ರತಿವಾದಿಗೆ ರೂ. 5 ಲಕ್ಷ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಕೋರ್ಟಿನ ಬಳಿಯೇ ಮಾಹಿತಿ ಕೊಟ್ಟಿದ್ದೇನೆ. ಸುಳ್ಳು ಸಂಗತಿಗಳಿಂದ ಕೂಡಿದ ಪರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ವಾದಿ ಮತ್ತು ಕರಾರು ಪತ್ರಕ್ಕೆ ಸಾಕ್ಷಿಗಳಾಗಿ ಸಹಿ ಮಾಡಿದ ಎಲ್ಲರೂ ಶಾಮೀಲಾಗಿ ಸುಳ್ಳು ಪತ್ರ ತಯಾರಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ

***ಪಾಟೀಸವಾಲುಃ 1 ನೇ ಪ್ರತಿವಾದಿಯ ಪರ ವಕೀಲರು ಇದೇ ಪಾಟೀಸವಾಲನ್ನು ಅಳವಡಿಸಿಕೊಳ್ಳುತ್ತೇವೆ ಎಂದು ಹೇಳಿದ್ದು ಅನುಮತಿ ನೀಡಲಾಗಿದೆ.***

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.

ದಿನಾಂಕಃ **21.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಪ್ರತಿವಾದಿಯ ಪರ ವಕೀಲರಿಂದಃ

01. ನಾನು ಮತ್ತು ವಾದಿ ಹೊನ್ನಮ್ಮ ಒಂದೇ ಕುಲಸ್ಥರು ಎಂದರೆ ಸರಿ. ದಾವಾ ವ್ಯವಹಾರವು ದಿನಾಂಕ 21.05.2016 ರಂದು ಸಿ. ಈಶಪ್ಪನವರ ಮನೆಯಲ್ಲಿ ನಡೆದಿತ್ತು. ನನ್ನ ಪ್ರಮಾಣ ಪತ್ರದಲ್ಲಿ ಸಿ. ಈಶಪ್ಪನ ಮನೆಯಲ್ಲಿ ವ್ಯವಹಾರ ನಡೆದಿತ್ತೆಂದು ನಾನು ಬರೆಯಿಸಿಲ್ಲ. ಆ ಸಮಯದಲ್ಲಿ ನಾನು, ಕೊಟ್ರಪ್ಪ, ದಂಡಪ್ಪ, ಮಂಜುನಾಥ, ಕಾಳಮ್ಮ, ಹೊನ್ನಮ್ಮ ಮತ್ತು ಚಿಮ್ಮನಹಳ್ಳಿ ಈಶಪ್ಪ ಹಾಜರಿದ್ದೆವು. ಆ ದಿನ ಸದರಿ ವ್ಯವಹಾರದ ಮಾತು-ಕತೆಗೆ ಭಾಗವಹಿಸಲು ವಾದಿ ಹೊನ್ನಮ್ಮ ನನ್ನನ್ನು ಕರೆದರು. ನಾನು, ಹೊನ್ನಮ್ಮ ಮತ್ತು ಕಾಳಮ್ಮ ಮೂವರೂ ಒಟ್ಟಿಗೇ ಈಶಪ್ಪನ ಮನೆಗೆ ಹೋಗಿದ್ದೆವು. ವಾದಿ ನನ್ನನ್ನು ಕರೆದಾಗ ನಾನು ತೇರುಬೀದಿಯಲ್ಲಿ ನಿಂತುಕೊಂಡಿದ್ದೆ. ಆಗ ಮಧ್ಯಾಹ್ನ 12 ರಿಂದ 1 ಗಂಟೆ ಇರಬಹುದು. ಈಶಪ್ಪನ ಮನೆಗೆ ಹೋದಾಗ ಮಧ್ಯಾಹ್ನ 1.30 ಗಂಟೆಯಾಗಿತ್ತೇ? ಎಂದರೆ ಆಗಿರಬಹುದು. ಈಶಪ್ಪನ ಮನೆಯ ಮುಂಬಾಗಿಲು ಉತ್ತರದ ಕಡೆಗೆ ಇರುತ್ತದೆ. ನಾವು ಅಲ್ಲಿಗೆ ಹೋದಾಗ ಈಶಪ್ಪ ಮತ್ತು ಆತನ ಕುಟುಂಬ ಸದಸ್ಯರು ಮಾತ್ರ ಇದ್ದರು. ನಾವು ಅಲ್ಲಿಗೆ ಹೋದ 5 ನಿಮಿಷಯಗಳ ಅಂತರದಲ್ಲಿ ಮಂಜುನಾಥ ಮತ್ತು ದಂಡಪ್ಪ ಅಲ್ಲಿಗೆ ಬಂದರು. ಎಲ್ಲರೂ ಬಂದು ಸೇರಿ ಮಾತನಾಡಲು ಕುಳಿತುಕೊಳ್ಳುವ ಹೊತ್ತಿಗೆ ಮಧ್ಯಾಹ್ನ 2 ಗಂಟೆ ಆಗಿತ್ತು. ಈ ವ್ಯವಹಾರ ನಡೆದಾಗ ನನಗೆ ವಯಸ್ಸು ಸುಮಾರು 26-27 ವರ್ಷ ಇತ್ತು. ವ್ಯವಹಾರವನ್ನು ಯಾರು ಮುಗಿಸಿದರು? ಎಂದರೆ ಈಶಪ್ಪನೇ ಮುಗಿಸಿದ. ವ್ಯವಹಾರ ನಡೆದಾಗ 1 ಎಕರೆಗೆ ಎಷ್ಟು ಬೆಲೆ ಎಂದು ಮಾತನಾಡಲಿಲ್ಲ, ಉಂಡಾಗುತ್ತಿ ಬೆಲೆ ಮಾತನಾಡಿದ್ದರು. ಕ್ರಯದ ವ್ಯವಹಾರ ನಡೆಯುವ ಕಾಲಕ್ಕೆ ಯಾವುದೇ ದಾಖಲೆಗಳನ್ನು ಯಾರೂ ಪರಿಶೀಲನೆ ಮಾಡಿರಲಿಲ್ಲ. ವ್ಯವಹಾರ ಮುಗಿದ ನಂತರ ಕಾಳಮ್ಮ ಹೋಗಿ ಕರಾರು ಬರೆಯುವ ಪತ್ರ ತಂದಿದ್ದಳು. ವ್ಯವಹಾರ ಮುಗಿದಾಗ ಸುಮಾರು 3 ರಿಂದ 3.30 ಗಂಟೆ ಆಗಿದ್ದಿರಬಹುದು. ನಾವು ಮಾತು-ಕತೆ ಮುಗಿದ ನಂತರ ಕಾಳಮ್ಮ ಬಾಂಡ್ ಪೇಪರ್ ನ್ನು ಹರಪನಹಳ್ಳಿಯಿಂದ ತರುತ್ತೇನೆ ಎಂದು ಹೊರಟು ಹೋದಳು. ನಾವು ಅಲ್ಲಿಂದ ಮನೆಗೆ ವಾಪಸ್ಸು ಹೋಗಿದ್ದು, ಮತ್ತೆ ಸಂಜೆ 6 ರಿಂದ 6.30 ಗಂಟೆಗೆ ಕರಾರು ಪತ್ರಕ್ಕೆ ಸಹಿ ಮಾಡಿಸಲು ನಮ್ಮನ್ನು ಕರೆದಿದ್ದರು. ಸಂಜೆ ಸುಮಾರು 6 ರಿಂದ 6.30 ಗಂಟೆಗೆ ನಾನು ಬಜಾರದಲ್ಲಿ ಇದ್ದಾಗ ವಾದಿ ಹೊನ್ನಮ್ಮ ಹಣ ಕೊಡಬೇಕು ಸಾಕ್ಷಿ ಸಹಿ ಮಾಡಲು ಬಾ ಎಂದು ನನ್ನನ್ನು ಕರೆದಿದ್ದಳು. ಕರಾರನ್ನು ಈಶಪ್ಪನೇ ಬರವಣಿಗೆ ಮಾಡಿದ್ದರು. ಈಶಪ್ಪನು ಕರಾರನ್ನು ನನ್ನ ಸಮಕ್ಷಮದಲ್ಲಿ ಬರೆದಿಲ್ಲ. ಪತ್ರ ಎಲ್ಲಾ ಬರವಣಿಗೆ ಆದ ನಂತರ ಹೊನ್ನಮ್ಮ ಬಂದು ಇದಕ್ಕೆ ಸಹಿ ಮಾಡು ಎಂದು ಕೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ವಾದಿ ಹೊನ್ನಮ್ಮ ಖೊಟ್ಟಿ ಕರಾರು ಪತ್ರ ಸೃಷ್ಟಿ ಮಾಡಿ ಅದಕ್ಕೆ ನನ್ನಿಂದ ಸಹಿ ಪಡೆದಿದ್ದಾಳೆ

ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ಸರ್ವೇ ನಂ. 185/ಸಿ ಯಲ್ಲಿ 33 ಎಕರೆ 64 ಸೆಂಟ್ಸ್ ಇರುವ ಬಗ್ಗೆ ಬರೆದಿಲ್ಲ, ಮಾರಾಟ ಮಾಡಲು ಒಪ್ಪಿದ 8 ಎಕರೆ ಬಗ್ಗೆ ಮಾತ್ರ ಬರೆದಿದ್ದಾರೆ. ಸದರಿ 33.64 ಎಕರೆ ಪೂರಾ ಜಮೀನು ಪ್ರತಿವಾದಿ ಕಾಳಮ್ಮನಿಗೆ ಸೇರಿಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಹೇಳಿದಂತೆ ವಾದಿಯು ಪ್ರತಿವಾದಿಗೆ ರೂ. 5 ಲಕ್ಷ ಮುಂಗಡ ಕೊಟ್ಟು ಕರಾರು ಬರೆಯಿಸಿಕೊಂಡಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 500 ರೂ. ಗಳ 10 ಕಟ್ಟುಗಳಲ್ಲಿ ಹಣ ಕೊಟ್ಟಿದ್ದಾರೆ.

***(ಸಮಯ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಿತು).***

ಮಧ್ಯಾಹ್ನ **2.45** ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ **2** ನೇ ಪ್ರತಿವಾದಿಯ ಪರ ವಕೀಲರಿಂದಃ

02. ವಾದಿ ಹೊನ್ನಮ್ಮ ಸದರಿ 5 ಲಕ್ಷ ರೂಪಾಯಿಗಳನ್ನು ಬ್ಯಾಂಕಿನಿಂದ ಬಿಡಿಸಿಕೊಂಡು ಬಂದ ಬಗ್ಗೆ ಅಥವಾ ಬೇರೆಯವರಿಂದ ಪಡೆದುಕೊಂಡು ಬಂದ ಬಗ್ಗೆ ನನಗೆ ತಿಳಿಸಲಿಲ್ಲ. ನನ್ನ ಪ್ರಮಾಣ ಪತ್ರ ತಯಾರಿಸಲು ವಾದಿ ಅಥವಾ ಆಕೆಯ ಮಕ್ಕಳು ಮಾಹಿತಿ ಕೊಟ್ಟಿದ್ದಾರೆ ಎಂದರೆ ಇಲ್ಲ, ಸತ್ಯವನ್ನೇ ಹೇಳಿ ಬರೆಯಿಸಿದ್ದೇನೆ. ವಕೀಲರು ಅವರ ಆಫೀಸಿನಲ್ಲಿ ನನ್ನ ಪ್ರಮಾಣ ಪತ್ರವನ್ನು ತಯಾರಿಸಿದ್ದರು . ನನ್ನನ್ನು ವಕೀಲರ ಕಚೇರಿಗೆ ವಾದಿ ಹೊನ್ನಮ್ಮ ಕರೆದುಕೊಂಡು ಹೋಗಿದ್ದಳು. ಈ ದಿನ ವಾದಿಯ ಮಗ ನನ್ನನ್ನು ಕೋರ್ಟಿಗೆ ಕರೆ ತಂದಿದ್ದಾನೆ ಎಂದರೆ ಜೊತೆಯಲ್ಲಿ ಬಂದಿದ್ದೇವೆ. ದಾವಾ ಸ್ವತ್ತನ್ನು ಕಬಳಿಸಲು ವಾದಿಯು 1 ನೇ ಪ್ರತಿವಾದಿಯ ಖೊಟ್ಟಿ ಸಹಿ ಮಾಡಿ ಖೊಟ್ಟಿ ಕರಾರು ಪತ್ರವನ್ನು ತಯಾರಿಸಿದ್ದು , ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಂಬಂಧಿಕಳಾದ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 21.05.2016 ರಂದು ದಾವಾ ಸ್ವತ್ತಿನ ಮಾರಾಟ ಕುರಿತು ಯಾವುದೇ ಮಾತು-ಕತೆ ಆಗಿಲ್ಲ ಮತ್ತು ನನ್ನ ಸಮಕ್ಷಮದಲ್ಲಿ ಯಾವುದೇ ಹಣ ಪಾವತಿ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).
ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.